ಬೆಂಗಳೂರಿನ ನಗರದ ಅನೌಪಚಾರಿಕ ಪಡಿತರ ಚೀಟಿ ಹೊಂದಿರುವವರಿಗೆ ಸೀಮೆ ಎಣ್ಣೆ ಹಾಗೂ ಪಾಮೊಲಿನ್ ಎಣ್ಣೆಯನ್ನು ನಿರ್ದಿಷ್ಟ ದಿನಾಂಕದಂದು ನೀಡುವ ಬಗ್ಗೆ.

೩೬೬. ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ).—ಮಾನ್ಯ ಆಹಾರ ಮತ್ತು ನಾಗರೀಕ ದಿನಾಂಕದಂದು ಹಾಗೂ ನಿರ್ದಿಷ್ಟ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ಪಡಿತರ ಚೀಟಿ ಹೊಂದಿರುವವರಿಗೆ ಸೀಮೆ ಎಣ್ಣೆಯನ್ನು ನಿರ್ದಿಷ್ಟ ಸಮಯಗಳಲ್ಲಿ ನೀಡುವ ವ್ಯವಸ್ಥೆ ಇದ್ದದ್ದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಸದರಿ ವ್ಯವಸ್ಥೆ ಈಗಲೂ ಜಾರಿಯಲ್ಲಿದೆಯೆ ?

ಇ) ಹಾಗಿದ್ದಲ್ಲಿ ಅನೇಕ ಕಡೆ ಈ ವ್ಯವಸ್ಥೆಯನ್ನು ಉಲ್ಲಂಘಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಪಾಮೊಲಿನ್ ಎಣ್ಣೆಯ ಬಗ್ಗೆಯೂ ಸಹ ವಿತರಣೆ ಸರಿಯಾಗಿ ಆಗದೆ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಸೀಮೆ ಎಣ್ಣೆ ಹಾಗೂ ಪಾಮೊಲಿನ್ ಎಣ್ಣೆಗಳ ವಿತರಣೆಯನ್ನು ಸರಿಪಡಿಸಲು ಸರ್ಕಾರದವರು ಕೂಡಲೇ ಕ್ರಮಕೈಗೊಳ್ಳುವರೇ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ. ಯಾವುದೇ ಸಾರ್ವಜನಿಕ ದೂರುಗಳು ಬಂದಲ್ಲಿ ತಕ್ಷಣ ಸರಿಪಡಿಸಲಾಗಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ನಗರದ ಕ್ಯಾನ್ಸರ್ ಆಸ್ಪತ್ರೆಯು ಧರ್ಮಶಾಲೆಯನ್ನಾಗಿ ಬಗ್ಗೆ.

೩೬೩. ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಗರದ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ಧರ್ಮಶಾಲೆ ಹಾಗೂ ಉಚಿತ ಊಟದ ವ್ಯವಸ್ಥೆ ವಿಸ್ತರಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಯಾರು ಯಾರಿಗೆ ಸದರಿ ಉಚಿತ ಊಟ ವ್ಯವಸ್ಥೆ ಮಾಡಲಾಗಿದೆ ?

ಇ) ರೋಗಿಗಳಿಗೆ ಸಾಕಷ್ಟು ಸ್ಥಳಾವಕಾಶ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆಯೆ ?

ಈ) ಮೇಲ್ಕಂಡ ಉಚಿತ ಊಟದ ವ್ಯವಸ್ಥೆಗೆ ತಗಲುವ ವೆಚ್ಚವನ್ನು ಹೇಗೆ ಸರಿದೂಗಿಸಲಾಗುವುದು ಮತ್ತು ಇತರ ಆಸ್ಪತ್ರೆಗಳಲ್ಲಿಯೂ ಧರ್ಮಶಾಲೆ ಹಾಗೂ ಉಚಿತ ಊಟ ವ್ಯವಸ್ಥೆಗಳನ್ನು ಮಾಡಲಾಗುವುದೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ನೂರರ ಊರುಗಳಿಂದ ಬಂದಿರುವ ತುಂಬಾ ಬಡ ರೋಗಿ ಹಾಗೂ ಅವರ ಒಬ್ಬ ಸಹವರ್ತಿಗೆ.

ಇ) ಕ್ಯಾನ್ಸರ್ ಚಿಕಿತ್ಸೆಗಾಗಿ ದೂರದ ಊರಂಗಳಿಂದ ಬಂದಿರುವ ಬಡ ರೋಗಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ಕ್ರಮ ಕೈಗೊಳ್ಳಲಾಗಿದೆ. ಧರ್ಮಶಾಲೆಯಲ್ಲಿ ತಂಗಿರುವ ಎಲ್ಲಾ ಬಡ ರೋಗಿಗಳಿಗೆ ಹಾಗೂ ಅವರ ಸಹವರ್ತಿಗಳಿಗೆ ವರ್ಷದಾದ್ಯಂತ ಊಟದ ವ್ಯವಸ್ಥೆ ಮಾಡಲು ಯೋಚಿಸಲಾಗಿದೆ.

ಈ) ಈ ಆಸ್ಪತ್ರೆಯಲ್ಲಿ ''ಪರಪೆಚ್ಯುಯಲ್ ಫ್ರೀ ಫೀಡಿಂಗ್ ಎಂಡೋಮೆಂಟ್ ಸ್ಕೀಮ್'' ಎಂಬ ಯೋಜನೆಯನ್ನು ಆಳವಡಿಸಿಕೊಳ್ಳಲಾಗಿದೆ. ಇದರಡಿಯಲ್ಲಿ ಸಿಹಿ ದಾನಿಗಳನ್ನು ಸಂಪರ್ಕಿಸಿ ಅವರ ಮನೆಯಲ್ಲಿ ಜರುಗಬಹುದಾದ ಯಾವುದೇ ಸಾಂಕೇತಿಕ ಶುಭಕಾರ್ಯ, ಹುಟ್ಟಿದ ದಿನದ ಸಮಾರಂಭ, ಮದುವೆಯ ಸಮಾರಂಭದಂದು ಧರ್ಮಶಾಲೆಯಲ್ಲಿ ಉಚಿತ ಊಟದ ವ್ಯವಸ್ಥೆಯ ಬೆಚ್ಚವನ್ನು ಅವರು ಭರಿಸುವಂತ ವ್ಯವಸ್ಥೆ ಮಾಡಿದೆ. ಇಂತಹ ಭರಿಸುವಂತ ದಾನಿಗಳಿಂದ ಐದಿಂಳ ರೂಪಾಯಿಗಳನ್ನು ದಾನವಾಗಿ ಪಡೆದ ಬ್ಯಾಂಕಿನಲ್ಲಿ ನಿಗದಿತ ಠೇವಣಿಯಲ್ಲಿ (ಫಿಕ್ಸೆಡ್) ಇರಿಸಿ ಆದರಿಂದ ಬರುವ ಬಡ್ಡಿಯಲ್ಲಿ ಉಚಿತ ಊಟದ ವ್ಯವಸ್ಥೆ ಮಾಡಲಾಗಿದೆ.

ಯಾರಾದರೂ ದಾನಿಗಳು ಮುಂದೆ ಬಂದರೆ ಇಂತಹ ವ್ಯವಸ್ಥೆಯನ್ನು ಇತರ ಆಸ್ಪತ್ರೆಗಳಲ್ಲಿ ಮಾಡಲು ಪರಿಶೀಲಿಸಲಾಗುವುದು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ಶಾಖೆ.

೬೭೮. ಶ್ರೀ ಪ್ರಭಾಕರ್ ಎಸ್ ರಾಣೆ (ಕಾರವಾರ).—ಮಾನ್ಯ ಆರೋಗ್ಯ ಮಂತ್ರಿ, ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆಗೆ ಸ್ವಂತ ಕಟ್ಟಡ ಇದೆಯೇ ಮತ್ತು ರಾಜ್ಯದ ಇತರೆಡೆಗಳಲ್ಲಿಯೂ ಸ್ವಂತ ಕಟ್ಟಡಗಳಿವೆಯೇ ?

ಆ) ಸದರಿ ಸಂಸ್ಥೆಯ ವಾರ್ಷಿಕ ವರಮಾನವೆಷ್ಟು ಮತ್ತು ಕೇಂದ್ರ ಸರ್ಕಾರದ ಅನುದಾನ ಏನಾದರೂ ದೊರಕುತ್ತಿದೆಯೇ (ಬಾಬುವಾರು ವಿವರಗಳನ್ನೊದಗಿಸಬೇಕಾಗಿ ವಿನಂತಿ)

ಇ) ಹಾಗಿದ್ದಲ್ಲಿ ಅನುದಾನದ ಮೊಬಲಗೆಷ್ಟು ?

ಈ) ಸಂಸ್ಥೆಯ ವಾರ್ಷಿಕ ಬೆಚ್ಚವೆಷ್ಟು: (ವಿವರಗಳನ್ನೊದಗಿಸಬೇಕಾಗಿ ವಿನಂತಿ)

ಉ) ಸಂಸ್ಥೆಯ ಒಟ್ಟು ಸದಸ್ಯರೆಷ್ಟು ? ಆ ಪೈಕಿ ಆಜೀವ ಸದಸ್ಯರೆಷ್ಟು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬೆಂಗಳೂರಿನಲ್ಲಿ ರೇಸ್‌ಕೋರ್ಸ್ ರಸ್ತೆಯಲ್ಲಿ ಸ್ವಂತ ಕಟ್ಟಡ ಇದೆ. ಈ ಕೆಳಕಂಡ ಜಿಲ್ಲೆಗಳಲ್ಲಿ ಈ ರೆಡ್‌ಕ್ರಾಸ್ ಸಂಸ್ಥೆಯ ಶಾಖೆಗಳಿಗೆ ಸ್ವಂತ ಕಟ್ಟಡಗಳು ಇವೆ.

೧) ತುಮಕೂರು
೨) ಬಳ್ಳಾರಿ
೩) ಧಾರವಾಡ

ಆ) ಸರಾಸರಿ ೫ ಲಕ್ಷ ರೂಪಾಯಿಗಳು. ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ ೧ರಲ್ಲಿ ಕೊಡಲಾಗಿದೆ. ಕೇಂದ್ರ ಸರ್ಕಾರ ಯಾವ ಅನುದಾನವನ್ನು ನೀಡುತ್ತಿಲ್ಲ.

ಇ) ಮೇಲಿನ (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ಈ) ಸರಾಸರಿ ೫ ಲಕ್ಷ ರೂಪಾಯಿಗಳು. ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ-೨ರಲ್ಲಿ ಕೊಡಲಾಗಿದೆ.

ಉ) ಸದಸ್ಯರ ವಿವರಗಳು ಈ ಕೆಳಕಂಡಂತಿವೆ.—

(೧೯೮೭ರ ಆಗಸ್ಟ್ ಅಂತ್ಯದವರೆಗೆ)

ಸದಸ್ಯರ ಸಂಖ್ಯೆ	೩೦೨೨
ಆಜೀವ ಸದಸ್ಯರ ಸಂಖ್ಯೆ	೨೭೯೦